# ಹರಿಕಥಾಮೃತಸಾರ - ೦೫

## ವಿಭೂತಿ ಸಂಧಿ

ಹರಿಕಥಾಮೃತಸಾರ ಗುರುಗಳ । ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥

ಶ್ರೀತರುಣಿ ವಲ್ಲಭನ ಪರಮ ವಿಭೂತಿರೂಪವ ಕಂಡಕಂಡ ।
ಲ್ಲೀ ತೆರದಿ ಚಿಂತಿಸುತ ಮನದಲಿ ನೋಡು ಸಂಭ್ರಮದಿ ॥
ನೀತಸಾಧಾರಣ ವಿಶೇಷ ಸ।ಜಾತಿ ನೈಜಾಹಿತವು ಸಹಜ ವಿ ।
ಜಾತಿ ಖಂಡಾಖಂಡ ಬಗೆಗಳನರಿತು ಬುಧರಿಂದ ॥ ॥೦೫-೦೧॥

ಜಲಧರಾಗಸದೊಳಗೆ ಚರಿಸುವ।ಹಲವು ಜೀವರ ನಿರ್ಮಿಸಿಹನದ ।
ರೊಳು ಸಜಾತಿ ವಿಜಾತಿ ಸಾಧಾರಣ ವಿಶೇಷಗಳ ॥
ತಿಳಿದು ತತ್ತತ್ಸ್ಥಾನದಲಿ ವೆ।ಗ್ಗಳಿಸಿ ಹಬ್ಬಿದ ಮನದಿ ಪೂಜಿಸು ।
ತಲವ ವ್ಯಾಪ್ತನ ರೂಪಗಳ ನೋಡುತಲಿ ಹಿಗ್ಗುವುದು ॥ ॥೦೫-೦೨॥

ಪ್ರತಿಮೆ ಶಾಲಿಗ್ರಾಮ ಗೋಽಭ್ಯಾ।ಗತನತಿಥಿ ಶ್ರೀ ತುಳಸಿ ಪಿಪ್ಪಲ ।
ಯತಿ ವನಸ್ಥ ಗೃಹಸ್ಥ ವಟು ಯಜಮಾನ ಸ್ವಪರಜನ ॥
ಪೃಥಿವಿ ಜಲಶಿಖಿ ಪವನ ತಾರಾ।ಪಥ ನವಗ್ರಹ ಯೋಗ ಕರಣ ಭ ।
ತಿಥಿ ಸಿತಾಸಿತಪಕ್ಷ ಸಂಕ್ರಮಣವನಧಿಷ್ಠಾನ ॥ ॥೦೫-೦೩॥

ಕಾದ ಕಾಂಚನದೊಳಗೆ ಶೋಭಿಪ । ಆದಿತೇಯಾಸ್ಯನ ತೆರದಿ ಲಕು ।
ಮೀಧವನು ಪ್ರತಿದಿನದಿ ಶಾಲಿಗ್ರಾಮದೊಳಗಿಪ್ಪ ॥
ಐದುಸಾವಿರಮೇಲೆ ಮೂವತ್ತೈದಧಿಕ ಐನೂರು ರೂಪದಿ ।
ಭೂಧರಗಳಭಿಮಾನಿ ದಿವಿಜರೊಳಿಪ್ಪನನವರತ ॥ ॥೦೫-೦೪॥

ಶ್ರೀರಮಣ ಪ್ರತಿಮೆಗಳೊಳಗೆ ಹದಿ।ಮೂರಧಿಕವಾಗಿಪ್ಪ ಮೇಲೈ ।
ನೂರು ರೂಪವ ಧರಿಸಿ ಇಪ್ಪನು ಆಹಿತಾಚಲದಿ ॥
ದಾರುಮಥನವ ಗೈಯೆ ಪಾವಕ । ತೋರುವಂತೆ ಪ್ರತೀಕ ಸುರರೊಳು ।
ತೋರುತಿಪ್ಪನು ತತ್ತದಾಕಾರದಲಿ ನೋಳ್ಪರಿಗೆ ॥ ॥೦೫-೦೫॥

ಕರಣನಿಯಾಮಕನು ತಾನುಪ।ಕರಣದೊಳಗೈವತ್ತೆರಡು ನಾ ।
ವಿದ ಹದಿನಾಲ್ಕಧಿಕ ಶತರೂಪಂಗಳನೆ ಧರಿಸಿ ॥
ಇರುತಿಹನು ತದ್ರೂಪನಾಮಗಳರಿತು ಪೂಜಿಸುತಿಹರ ಪೂಜೆಯ ।
ನಿರುತ ಕೈಗೊಂಬನು ತೃಷಾರ್ತನು ಜಲವ ಕೊಂಬಂತೆ ॥ ॥೦೫-೦೬॥

ಬಿಂಬರೂಪನು ಈ ತೆರದಿ ಜಡಪೊಂಬಸಿರ ಮೊದಲಾದ ಸುರರೊಳ ।
ಗಿಂಬುಗೊಂಡಿಹನೆಂದರಿದು ಧರ್ಮಾರ್ಥಕಾಮಗಳ ॥
ಹಂಬಲಿಸದನುದಿನದಿ ವಿಶ್ವಕುಟುಂಬಿ ಕೊಟ್ಟ ಕಣಾನ್ನ ಕುತ್ಸಿತ ।
ಕಂಬಳಿಯೆ ಸೌಭಾಗ್ಯವೆಂದವನಂಘ್ರಿಗಳ ಭಜಿಸು ॥ ॥೦೫-೦೭॥

ವಾರಿಯೊಳಗಿಪ್ಪತ್ತನಾಲಕು ಮೂರೆರಡು ಸಾವಿರದ ಮೇಲ್ ಮು ।
ನ್ನೂರ ಹದಿನೇಳೆನಿಪ ರೂಪವು ಶ್ರೀತುಳಸಿದಳದಿ ॥
ನೂರ ಅರವತ್ತೊಂದು ಪುಷ್ಪದಿ । ಮೂರಧಿಕದಶ ದೀಪದೊಳು ನಾ ।
ನೂರಮೂರುಸುಮೂರ್ತಿಗಳುಗಂಧದೊಳಗಿರುತಿಹವು ॥ ॥೦೫-೦೮॥

ಅಷ್ಟದಳ ಸದ್ಹೃದಯ ಕಮಲಾಧಿಷ್ಠಿತನು ತಾನಾಗಿ ಸರ್ವೋ ।
ತ್ಕೃಷ್ಟಮಹಿಮನು ದಳಗಳಲಿ ಸಂಚರಿಸುತೊಳಗಿದ್ದು ॥
ದುಷ್ಟರಿಗೆ ದುರ್ಬುದ್ಧಿ ಕರ್ಮ ವಿಶಿಷ್ಟರಿಗೆ ಸುಜ್ಞಾನ ಧರ್ಮಸು ।
ಪುಷ್ಟಿಗೈಸುತ ಸಂತೈಪ ನಿರ್ದುಷ್ಟ ಸುಖಪೂರ್ಣ ॥ ॥೦೫-೦೯॥

ವಿತ್ತದೇಹಾಗಾರ ದಾರಾಪತ್ಯ ಮಿತ್ರಾದಿ ಗಳೊಳಗೆ ಗುಣ ।
ಚಿತ್ತ ಬುಧ್ಯಾದಿಂದ್ರಿಯಗಳೊಳು ಜ್ಞಾನಕರ್ಮದೊಳು ॥
ತತ್ತದಾಹ್ವಯನಾಗಿ ಕರೆಸುತ । ಸತ್ಯ ಸಂಕಲ್ಪಾನುಸಾರದಿ ।
ನಿತ್ಯದಲಿ ತಾ ಮಾಡಿ ಮಾಡಿಪನೆಂದು ಸ್ಮರಿಸುತಿರು ॥ ॥೦೫-೧೦॥

ಭಾವದ್ರವ್ಯ ಕ್ರಿಯೆಗಳೆನಿಸುವ । ಈ ವಿಧಾದ್ವೈತ ತ್ರಯಂಗಳ ।
ಭಾವಿಸುತ ಸದ್ಭಕ್ತಿಯಲಿ ಸರ್ವತ್ರ ಮರೆಯದಲೆ ॥
ತಾವಕನು ತಾನೆಂದು ಪ್ರತಿದಿನ । ಸೇವಿಸುವ ಭಕ್ತರಿಗೆ ತನ್ನನು ।
ಈವ ಕಾವ ಕೃಪಾಳು ಕರಿವರಗೊಲಿದ ತೆರನಂತೆ ॥ ॥೦೫-೧೧॥

ಬಾಂದಳವೆ ಮೊದಲಾದುದರೊಳೊಂದೊಂದರಲಿ ಪೂಜಾ ಸುಸಾಧನ ।
ವೆಂದೆನಿಸುವ ಪದಾರ್ಥಗಳು ಬಗೆಬಗೆಯ ನೂತನದಿ ॥
ಸಂದಣಿಸಿಕೊಂಡಿಹವು ಧ್ಯಾನಕೆ । ತಂದಿನಿತು ಚಿಂತಿಸಿ ಸದಾ ಗೋ ।
ವಿಂದನರ್ಚಿಸಿ ನೋಡು ನಲಿನಲಿದಾಡು ಕೊಂಡಾಡು ॥ ॥೦೫-೧೨॥

ಜಲಜನಾಭನ ಮೂರ್ತಿ ಮನದಲಿ । ನೆಲೆಗೊಳಿಸಿ ನಿಶ್ಚಲ ಭಕುತಿಯಲಿ ।
ಚಳಿ ಬಿಸಿಲು ಮಳೆಗಾಳಿಗಳ ನಿಂದಿಸದೆ ನಿತ್ಯದಲಿ ॥
ನೆಲದಲಿಹ ಗಂಧವೆ ಸುಗಂಧವು । ಜಲವೆ ರಸ ರೂಪವೆ ಸುದೀಪವು ।
ಎಲರು ಚಾಮರ ಶಬ್ದ ವಾದ್ಯಗಳರ್ಪಿಸಲು ಒಲಿವ ॥ ॥೦೫-೧೩॥

ಗೋಲಕಗಳು ರಮಾರಮಣನ ನಿಜಾಲಯಗಳನುದಿನದಿ ಸಂಪ್ರ ।
ಕ್ಷಾಲನೆಯೇ ಸಮ್ಮಾರ್ಜನವು ಕರಣಗಳೆ ದೀಪಗಳು ॥
ಸಾಲು ತತ್ತದ್ವಿಷಯಗಳ ಸಮ್ಮೇಳನವೇ ಪರಿಯಂಕ ತತ್ಸುಖ ।
ದೇಳಿಗೆಯೆ ಸುಪ್ತತ್ರಿಗಾತ್ಮನಿರ್ವೇದನವೆ ವಸನ ॥ ||೦೫-೧೪||

ಪಾಪಕರ್ಮವು ಪಾದುಕೆಗಳನುಲೇಪನವು ಸತ್ಪುಣ್ಯಶಾಸ್ತ್ರಾ ।
ಲಾಪನವೆ ಶ್ರೀತುಲಸಿ ಸುಮನೋವೃತ್ತಿಗಳು ಸುಮನ ॥
ಕೋಪ ಧೂಪವು ಭಕ್ತಿ ಭೂಷಣ । ವ್ಯಾಪಿಸಿದ ಸದ್ಬುದ್ಧಿ ಛತ್ರವು ।
ದೀಪವೆ ಸುಜ್ಞಾನವಾರಾರ್ತಿಗಳೆ ಗುಣಕಥನ ॥ ||೦೫-೧೫||

ಮನವಚನಕಾಯಕ ಪ್ರದಕ್ಷಿಣೆಯನುದಿನದಿ ಸರ್ವತ್ರ ವ್ಯಾಪಕ ।
ವನರುಹಕ್ಷಣಗರ್ಪಿಸುತ ಮೋದಿಸುತಲಿರು ಸತತ ॥
ಅನುಭವಕೆ ತಂದುಕೊ ಸಕಲ ಸಾಧನಗಳೊಳಗಿದೆ ಮುಖ್ಯ ಪಾಮರ ।
ಮನುಜರಿಗೆ ಪೇಳಿದರೆ ತಿಳಿಯದು ಬುಧರಿಗಲ್ಲದಲೆ ॥ ||೦೫-೧೬||

ಚತುರವಿಧ ಪುರುಷಾರ್ಥ ಪಡೆವರೆ । ಚತುರದಶಲೋಕಗಳ ಮಧ್ಯದೊ ।
ಳಿತರುಪಾಯಗಳಿಲ್ಲ ನೋಡಲು ಸಕಲಶಾಸ್ತ್ರದಲಿ ॥
ಸತತ ವಿಷಯೇಂದ್ರಿಯಗಳಲಿ ಪ್ರವಿತತನೆನಿಸಿ ರಾಜಿಸುವ ಲಕುಮೀ ।
ಪತಿಗೆ ಸರ್ವಸಮರ್ಪಣೆಯು ಮಹಪೂಜೆ ಸದುಪಾಯ ॥ ||೦೫-೧೭||

ಗೋಲಕವೆ ಕುಂಡಾಗ್ನಿ ಕರಣವು । ಮೇಲೊದಗಿ ಬಹವಿಷಯ ಸಮಿಧೆಯು ॥
ಗಾಳಿ ಯತ್ನವು ಕಾಮ ಧೂಮವು ಸನ್ನಿಧಾನಾರ್ಚಿ ॥
ಮೇಳನವೆ ಪ್ರಜ್ವಾಲಿ ಕಿಡಿಗಳು । ತೂಳಿದಾನುದಗಳೆ ತತ್ತ ।
ತ್ಕಾಲ ಮಾತುಗಳೆಲ್ಲ ಮಂತ್ರಾಧ್ಯಾತ್ಮಯಜ್ಞವಿದು ॥ ||೦೫-೧೮||

ಮಧುವಿರೋಧಿಯ ಪಟ್ಟಣಕೆ ಪೂರ್ವದ ಕವಾಟಗಳಕ್ಷಿ ನಾಸಿಕ ।
ವದನ ಶ್ರೋತ್ರಗಳೆರಡು ದಕ್ಷಿಣ ಉತ್ತರದ್ವಾರ ॥
ಗುದಉಪಸ್ಥಗಳೆರಡು ಪಶ್ಚಿಮ । ಕದಗಳೆನಿಪವು ಷಟ್ ಸರೋಜವೆ ।
ಸದನ ಹೃದಯವೆ ಮಂಟಪಂಗಳು ತ್ರಿಗುಣಗಳೆ ಕಲಶ ॥ ||೦೫-೧೯||

ಧಾತುಗಳು ಸಪ್ತಾವರಣ ಉಪವೀಥಿಗಳೆ ನಾಡಿಗಳು ಮದಗಳು ।
ಯೂಥಪಗಳು ಸುಷುಮ್ನಾನಾಡಿಯೆ ರಾಜಪಂಥಾನ ॥
ಈ ತನೂರುಹಗಳೆ ವನಂಗಳು । ಮಾತರಿಶ್ವನು ಪಂಚರೂಪದಿ ।
ಪಾತಕಗಳೆಂಬರಿಗಳನು ಸಂಹರಿಪ ತಳವಾರ ॥ ||೦೫-೨೦||

ಇನಶಶಾಂಕಾದಿಗಳೆ ಲಕ್ಷ್ಮೀವನಿತೆಯರಸನ ದ್ವಾರಪಾಲಕ |
ರೆನಿಸುತಿಪ್ಪರು ಮನದ ವೃತ್ತಿಗಳೆ ಪದಾತಿಗಳು ||
ಅನುಭವಿಪ ವಿಷಯಂಗಳೇ ಪಟ್ಟಣಕೆ ಬಪ್ಪ ಪಸಾರಗಳು ಜೀ |
ವನು ಸುವರ್ತಕ ಕಪ್ಪಗಳ ಕೈಕೊಂಬ ಹರಿ ತಾನು || ||೦೫-೨೧||

ಉರುಪರಾಕ್ರಮನರಮನಿಗೆ ದಶಕರಣಗಳು ಕನ್ನಡಿಯ ಸಾಲುಗ |
ಳರವಿದೂರನ ಸದ್ವಿಹಾರಕೆ ಚಿತ್ತ ಮಂಟಪವು ||
ಮರಳಿ ಬೀಸುವ ಶ್ವಾಸಗಳು ಚಾಮರ ವಿಲಾಸಿನಿ ಬುದ್ಧಿ ದಾಮೋ |
ದರಗೆ ಸಾಷ್ಟಾಂಗ ಪ್ರಣಾಮಗಳೇ ಸುಶಯನಗಳು || ||೦೫-೨೨||

ಮಾರಮಣನರಮನೆಗೆ ಸುಮಹಾದ್ವಾರವೆನಿಸುವ ವದನಸೊಪ್ಪುವ ||
ತೋರಣ ಸ್ಮಶ್ರುಗಳು ಕೇಶಗಳೇ ಪತಾಕೆಗಳು ||
ಊರಿನಡೆವಂಘ್ರಿಗಳು ಜಂಘೇಗಳೂರು ಮಧ್ಯೋದರ ಶಿರಗಳಾ |
ಗಾರದುಪ್ಪರಿಗೆಗಳು ಕೋಶಗಳೈದು ಕೋಣೆಗಳು || ||೦೫-೨೩||

ಈ ಶರೀರವೆ ರಥ ಪತಾಕ ಸುವಾಸಗಳೆ ಪುಂಡ್ರಗಳು ಧ್ವಜ ಸಿಂ |
ಹಾಸನವೆ ಚಿತ್ತವು ಸುಬುದ್ಧಿಯೇ ಕಳಶ ಸನ್ಮನವೆ ||
ಪಾಶ ಗುಣ ದಂಡತ್ರಯಗಳು ಶುಭಾಶುಭದ್ವಯ ಕರ್ಮ ಚಕ್ರ ಮ |
ಹಾಸಮರ್ಥಾಶ್ವಗಳು ದಶಕರಣಂಗಳೆನಿಸುವುವು || ||೦೫-೨೪||

ಮಾತರಿಶ್ವನು ದೇಹರಥದೊಳು | ಸೂತನಾಗಿಹ ಸರ್ವಕಾಲದಿ |
ಶ್ರೀ ತರುಣಿವಲ್ಲಭ ರಥಿಕನೆಂದರಿದು ನಿತ್ಯದಲಿ ||
ಪ್ರೀತಿಯಿಂದಲಿ ಪೋಷಿಸುವ ವಾತಾತಪಾದಿಗಳಿಂದಲವಿರತ |
ಈ ತನುವಿನೊಳು ಮಮತೆ ಬಿಟ್ಟವನವನೆಮಹಯೋಗಿ || ||೦೫-೨೫||

ಭವವೆನಿಪ ವನಧಿಯೊಳು ಕರ್ಮಪ್ರವಹದೊಳು ಸಂಚರಿಸುತಿಹ ದೇ |
ಹವ ಸುನಾವೆಯ ಮಾಡಿ ತನ್ನವರಿಂದಲೋಡಗೂಡಿ ||
ದಿವಸದಿವಸಗಳಲ್ಲಿ ಲಕುಮೀಧವನು ಕ್ರೀಡಿಪನೆಂದು ಚಿಂತಿಸಿ |
ಪವನನಯ್ಯ ಭವಾಬ್ಧಿ ದಾಟಿಸಿ ಪರಮಸುಖವೀವ || ||೦೫-೨೬||

ಆಪಣಾಲಯಗತ ಪದಾರ್ಥವು | ಸ್ತ್ರೀಪುರುಷರುಗಳಿಂದ್ರಿಯಗಳಲಿ |
ದೀಪಪಾತ್ರೊಳಿಡುವ ತೈಲಾದಿ ದ್ರವ್ಯಗಳ ||
ಆ ಪರಮಗವದಾನವೆಂದು ಪದೇಪದೇ ಮರೆಯದಲೆ ಸ್ಮರಿಸುತ |
ಭೂಪನಂದದಿ ಸಂಚರಿಸು ನಿರ್ಭಯದಿ ಸರ್ವತ್ರ || ||೦೫-೨೭||

ವಾರಿಜಭವಾಂಡವೆ ಸುಮಂಟಪ । ಮೇರುಗಿರಿ ಸಿಂಹಾಸನವು ಭಾ ।
ಗೀರಥಿಯೆ ಮಜ್ಜನವು ದಿಗ್ವಸ್ತ್ರಗಳು ನುಡಿ ಮಂತ್ರ ॥
ಭೂರುಹಜ ಫಲಪುಷ್ಪ ಗಂಧ ಸಮೀರ ಶಶಿರವಿ ದೀಪ ಭೂಷಣ ।
ತಾರಕೆಗಳೆಂದರ್ಪಿಸಲು ಕೈಕೊಂಡು ಮನ್ನಿಸುವ ॥ ||೦೫-೨೮||

ಭೂಸುರರೊಳಿಪ್ಪಬ್ಜಭವನೊಳು । ವಾಸುದೇವನು ವಾಯುಖಗಪ ಸ ।
ದಾಶಿವಹಿಪೇಂದ್ರನು ವಿವಸ್ವನ್ನಾಮಕಸೂರ್ಯ ॥
ಭೇಶಕಾಮಮರಾಸ್ಯ ವರುಣಾದೀ ಸುರರು ಕ್ಷತ್ರಿಯರೊಳಿಪ್ಪರು ।
ವಾಸವಾಗಿಹ ಸಂಕರುಷಣನ ನೋಡಿ ಮೋದಿಪರು ॥ ||೦೫-೨೯||

ಮೀನೇತನತನಯ ಪ್ರಾಣಾಪಾನ ವ್ಯಾನೋದಾನಮುಖ್ಯ ।
ಕೋನಪಂಚಾಶನ್ಮರುದ್ಗಣ ರುದ್ರ ವಸುಗಣರು ।
ಮೆನಕಾತ್ಮಜಕುವರ ವಿಷ್ವಕ್ಸೇನ ಧನಪಾದ್ಯ ನಿಮಿಷರನು ಸ ।
ದಾನುರಾಗದಿ ಧೇನಿಪುದು ವೈಶ್ಯರೊಳು ಪ್ರದ್ಯುಮ್ನ ॥ ||೦೫-೩೦||

ಇರುತಿಹರು ನಾಸತ್ಯದಸ್ರರುನಿರಋತಿಯು ಯಮಧರ್ಮ ಯಮಕಿಂ ।
ಕರರು ಮೇದಿನಿ ಕಾಲಮೃತ್ಯು ಶನ್ಯೈಶ್ಚರಾದಿಗಳು ॥
ಕರೆಸಿಕೊಂಬರು ಶೂದ್ರರೆಂದನವರತ ಶೂದ್ರರೊಳಿಪ್ಪರಿವರೊಳ ।
ಗರವಿದೂರನಿರುದ್ಧನಿಹನೆಂದರಿತು ಮನ್ನಿಪುದು ॥ ||೦೫-೩೧||

ವೀತಭಯ ನಾರಾಯಣ ಚತುಷ್ಪಾತ್ ತಾನೆಂದೆನಿಸಿ ತತ್ತ ।
ಜ್ಜಾತಿ ಧರ್ಮ ಸುಕರ್ಮಗಳ ತಾ ಮಾಡಿ ಮಾಡಿಸುವ ॥
ಚೇತನರ ಒಳಹೊರಗೆ ಓತಪ್ರೋತನಾಗಿದ್ದೆಲ್ಲರಿಗೆ ಸಂ ।
ಪ್ರೀತಿಯಲಿ ಧರ್ಮಾರ್ಥಕಾಮಾದಿಗಳ ಕೊಡುತಿಹನು ॥ ||೦೫-೩೨||

ನಿಧನ ಧನದ ವಿಧಾತ ಪಿತಾಭ್ಯಧಿಕ ಸಮಾಸಮವರ್ತಿ ಸಾಮಗ ।
ತ್ರಿದಶಗಣಸಂಪೂಜ್ಯ ತ್ರಿಕಕುದ್ಧಾಮ ಶುಭನಾಮ ॥
ಮಧುಮಥನ ಭೃಗುರಾಮ ಘೋಟಕ । ವದನ ಸರ್ವಪದಾರ್ಥ ದೊಳು ತುದಿ ।
ಮೊದಲು ತುಂಬಿಹನೆಂದು ಚಿಂತಿಸು ಬಿಂಬರೂಪದಲಿ ॥ ||೦೫-೩೩||

ಕನ್ನಡಿಯ ಕೈವಿಡಿದು ನೋಡಲು । ತನ್ನಿರವು ಸವ್ಯಾಪಸವ್ಯದಿ ।
ಕಣ್ಣಿಗೊಪ್ಪುವ ತೆರದಿ ಅನಿರುದ್ಧನಿಗೆ ಈ ಜಗವು ।
ಭಿನ್ನಭಿನ್ನವೆ ತೋರುತಿಪ್ಪುದು । ಜನ್ಯವಾದುದರಿಂದ ಪ್ರತಿಬಿಂ ।
ಬನ್ನಮಯಗಾನೆಂದರಿದು ಪೂಜಿಸಲು ಕೈಗೊಂಬ ॥ ||೦೫-೩೪||

ಬಿಂಬರೆನಿಪರು ಸ್ವೋತ್ತಮರು ಪ್ರತಿ।ಬಿಂಬರೆನಿಪರು ಸ್ವಾವರರು ಪ್ರತಿ ।
ಬಿಂಬ ಬಿಂಬಗಳೊಳಗೆ ಕೇವಲ ಬಿಂಬ ಹರಿಯೆಂದು ॥
ಸಂಭ್ರಮದಿ ಪಾಡುತಲಿ ನೋಡುತ । ಉಂಬುಡುವುದಿಡುವುದು ಕೊಡುವುದೆ ।
ಲ್ಲಂಬುಜಾಂಬಕನಂಘ್ರಿಪೂಜೆಗಳೆಂದು ನಲಿದಾಡು ॥ ||೦೫-೩೫||

ನದಿಯ ಜಲ ನದಿಗೆರೆವ ತೆರದಂ।ದದಲಿ ಭಗವದ್ದತ್ತ ಕರ್ಮಗ ।
ಳುದಧಿಶಯನನಿಗರ್ಪಿಸುತ ವ್ಯಾವೃತ್ತ ನೀನಾಗಿ ॥
ವಿಧಿನಿಷೇದಾದಿಗಳಿಗೊಳಗಾ।ಗದಲೆ ಮಾಡುತ ದರ್ಪಿಯಂದದಿ ।
ಪದುಮನಾಭನ ಸಕಲ ಕರ್ಮಗಳಲ್ಲಿ ನೆನೆವುತಿರು ॥ ||೦೫-೩೬||

ಅರಿಯದಿರ್ದರು ಎಮ್ಮೊಳಿದ್ದನವರತ ವಿಷಯಗಳುಂಬ ಜ್ಞಾನೋ ।
ತ್ತರದಿ ತನಗರ್ಪಿಸಲು ಚಿತ್ಸುಖವಿತ್ತು ಸಂತೈಪ ॥
ಸರಿತು ಕಾಲಪ್ರವಹಗಳು ಕಂ।ಡರೆಯು ಸರಿ ಕಾಣಾದಿರೆ ಪರಿವುವು ।
ಮರಳಿ ಮಜ್ಜನ ಪಾನ ಕರ್ಮಗಳಿಂದೆ ಸುಖಿಪಹವು ॥ ||೦೫-೩೭||

ಏನು ಮಾಡುವ ಕರ್ಮಗಳು ಲಕು।ಮೀನಿವಾಸನಿಗರ್ಪಿಸನುಸಂ ।
ಧಾನಪೂರ್ವಕದಿಂದ ಸಂದೇಹಿಸದೆ ದಿನದಿನದಿ ॥
ಮಾನನಿಧಿ ಕೈಕೊಂಡು ಸುಖವಿತ್ತಾನತರ ಸಂತೈಪ ತೃಣ ಜಲ ।
ಧೇನು ತಾನುಂಡನವರತ ಪಾಲ್ಗರೆವತೆರದಂತೆ ॥ ||೦೫-೩೮||

ಪೂರ್ವ ದಕ್ಷಿಣ ಪಶ್ಚಿಮೋತ್ತರ । ಪಾರ್ವತೀಪತಿಯಗ್ನಿವಾಯು ಸು ।
ಶಾರ್ವರೀಶರ ದಿಗ್ವಲಯದೊಳು ಹಂಸನಾಮಕನು ॥
ಸರ್ವಕಾಲದಿ ಸರ್ವರೊಳು ಸುರ।ಸಾರ್ವಭೌಮನು ಸ್ವೇಚ್ಛೆಯಲಿ ಮ ।
ತ್ತೋರ್ವರಿಗೆ ಗೋಚರಿಸದವ್ಯಕ್ತಾತ್ಮ ನೆಂದೆನಿಸಿ ॥ ||೦೫-೩೯||

ಪರಿ ಇಡಾವತ್ಸರನು ಸಂವ।ತ್ಸರದೊಳನಿರುದ್ಧದಿರೂಪವ ।
ಧರಿಸಿ ಬಾರ್ಹಸ್ಪತ್ಯ ಸೌರಭ ಚಾಂದ್ರಮನು ಎನಿಸಿ ॥
ಇರುತಿಹ ಜಗನ್ನಾಥ ವಿಠ್ಠಲ । ಸ್ಮರಿಸುವವರನು ಸಂತಯಿಪನೆಂ ।
ದುರುಪರಾಕ್ರಮನುಚಿತಸಾಧನ ಯೋಗ್ಯತೆಯನರಿತು ॥ ||೦೫-೪೦||